72(241) ಶ್ರೀ ಶಿವಶಂಕರ್‌ರೆಡ್ಡಿ ಎಲ್.ಹೆಚ್. (ಗೌರಿಬಿದನೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಕೇವಲ ಎರಡು ಜೂನಿಯರ್ ಕಾಲೇಜುಗಳು ಇರುವುದು ನಿಜವಲ್ಲವೇ;

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಒಂದೂ ಇಲ್ಲದೇ ಈ ಭಾಗದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಮಂಡಿಸಿದ್ದರೂ ಮಂಜೂರಾಗದೇ ಇರುವುದು ನಿಜವಲ್ಲವೇ;

ಈ) 2006–07ನೇ ಸಾಲಿನ ಆಯವ್ಯಯದಲ್ಲಿ ಹಣ ಮಂಜೂರು ಮಾಡಿ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಿ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೇ;

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಆದರೆ ಎರಡು ಖಾಸಗಿ ಅನುದಾನಿತ ಕಾಲೇಜುಗಳು ಇರುತ್ತದೆ. (ಎ.ಇ.ಎಸ್. ನ್ಯಾಷನಲ್ ಕಾಲೇಜು ಮತ್ತು ಆಚಾರ್ಯ ಮಹಿಳಾ ಪ್ರಥಮ ದರ್ಜೆ ಕಾಲೇಜು)

ಇ) ಸರ್ಕಾರದಿಂದಲೇ ವೇತನ ಅನುದಾನ ಪಡೆಯುತ್ತಿರುವ ಎರಡು ಕಾಲೇಜುಗಳು ಇರುವುದರಿಂದ ಸರ್ಕಾರಿ ಕಾಲೇಜನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಲಾಗುತ್ತಿಲ್ಲ.

ಈ) ಉದ್ಭವಿಸುವುದಿಲ್ಲ.

73 (151) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ( ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಇದಕ್ಕಾಗಿ ಉಚಿತ ನಿವೇಶನಕಾಂಕ್ಷಿಗಳ ಸಂಖ್ಯೆ ಎಷ್ಟು; ಈ ಬೇಡಿಕೆಗಳನ್ನು ಪೂರೈಸಲು ಸರ್ಕಾರ ಯಾವ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ;

ಇ) ರಾಜ್ಯದ ಕಡುಬಡವರಿಗೆ ಎಷ್ಟು ಮನೆಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ ಇದಕ್ಕಾಗಿ ಬೇಡಿಕೆಯಿರುವ ಸಂಖ್ಯೆ ಎಷ್ಟು ; (ಜಿಲ್ಲಾವಾರು) ಮಾಹಿತಿ ಒದಗಿಸುವುದು)?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ಸಂಖ್ಯೆ 13236 ಜಿಲ್ಲಾವಾರು ವಿವರವನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಆ) ಜೂನ್ 2003ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆ ಮಾಡಿದ್ದು, ಈ ಸಮೀಕ್ಷೆ ಪ್ರಕಾರ ನಿವೇಶನಾಕಾಂಕ್ಷಿಗಳ ಸಂಖ್ಯೆ 1042986. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯ ನಂತರ 2003–04 ರಿಂದ 2005–06 ಸಾಲಿನ ವರೆಗೆ 13236 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಉಳಿದವರಿಗೆ ಆದಷ್ಟು ಶೀಘ್ರವಾಗಿ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಇ) ಸಮೀಕ್ಷೆ ಪ್ರಕಾರ 1226345 ವಸತಿ ರಹಿತರು ಇರುವುದು ಕಂಡುಬಂದಿರುತ್ತದೆ. ಸಮೀಕ್ಷೆಯ ನಂತರ 2003–2004 ರಿಂದ 2005–2006ರ ಸಾಲಿನ ವರೆಗೆ 575925 ಮನೆಗಳ ಗುರಿಯನ್ನು ನೀಡಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ 'ಆ'ದಲ್ಲಿ ನೀಡಲಾಗಿದೆ.

**ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ವಿವಿರ**

| ಕ್ರಮ ಸಂಖ್ಯೆ | ಜಿಲ್ಲೆಗಳು | 2003–2004 | 2004–2005 | 2005–2006 | ಒಟ್ಟು |
|---|---|---|---|---|---|
| 1 | 2 | 3 | 4 | 5 | 6 |
| 1 | ಬಾಗಲ ಕೋಟೆ | 0 | 0 | 0 | 0 |
| 2 | ಬೆಂಗಳೂರು ಗ್ರಾಮಾಂತರ | 0 | 0 | 0 | 0 |
| 3 | ಬೆಂಗಳೂರು ನಗರ | 0 | 0 | 838 | 838 |
| 4 | ಬೆಳಗಾವಿ | 0 | 928 | 0 | 928 |
| 5 | ಬೆಳ್ಳಾರಿ | 0 | 0 | 0 | 0 |
| 6 | ಬೀದರ | 0 | 0 | 0 | 0 |
| 7 | ವಿಜಾಪುರ | 1653 | 54 | 45 | 1752 |
| 8 | ಚಾಮರಾಜ ನಗರ | 0 | 0 | 0 | 0 |
| 9 | ಚಿಕ್ಕಮಗಳೂರು | 46 | 305 | 0 | 351 |
| 10 | ಚಿತ್ರದುರ್ಗ | 0 | 819 | 0 | 819 |
| 11 | ದಕ್ಷಿಣ ನ್ನಡ | 791 | 490 | 5 | 1286 |
| 12 | ದಾವಣಗೆರೆ | 0 | 412 | 0 | 412 |
| 13 | ಧಾರವಾಡ | 0 | 0 | 0 | 0 |
| 14 | ಗದಗ | 0 | 125 | 0 | 125 |

| | | | | | |
|---|---|---|---|---|---|
| 15 | ಗುಲ್ಬರ್ಗಾ | 408 | 0 | 0 | 480 |
| 16 | ಹಾಸನ | 2174 | 0 | 0 | 2174 |
| 17 | ಹಾವೇರಿ | 524 | 0 | 0 | 524 |
| 18 | ಕೊಡಗು | 0 | 118 | 0 | 118 |
| 19 | ಕೋಲಾರ್ | 0 | 0 | 0 | 0 |
| 20 | ಕೊಪ್ಪಳ | 0 | 0 | 0 | 0 |
| 21 | ಮಂಡ್ಯ | 0 | 0 | 0 | 0 |
| 22 | ಮೈಸೂರು | 0 | 0 | 0 | 0 |
| 23 | ರಾಯಚೂರು | 0 | 825 | 0 | 825 |
| 24 | ಶಿವಮೊಗ್ಗ | 0 | 65 | 0 | 65 |
| 25 | ತುಮಕೂರು | 0 | 496 | 0 | 496 |
| 26 | ಉಡುಪಿ | 1796 | 125 | 194 | 2115 |
| 27 | ಉತ್ತರ ಕನ್ನಡ | 0 | 0 | 0 | 0 |
| | **ಒಟ್ಟು** | **7392** | **4762** | **1082** | **13236** |

**ಅನುಬಂಧ 'ಆ'**

**ರಾಜ್ಯದಲ್ಲಿ ಬೇಡಿಕೆ ಇರುವ ವಸತಿರಹಿತ ಸಂಖ್ಯೆ**

| | | |
|---|---|---|
| 1 | Bagalkot | 16234 |
| 2 | Bangalore Rural | 67347 |
| 3 | Bangalore Urban | 24738 |
| 4 | Belgaum | 99286 |
| 5 | Bellary | 47909 |
| 6 | Bidar | 54092 |
| 7 | Bijapur | 40895 |
| 8 | Chamarajanagar | 52648 |
| 9 | Chikmagalur | 26291 |
| 10 | Chitradurga | 90101 |

| | | |
|---|---|---|
| 11 | Dakshina Kannada | 14736 |
| 12 | Davanagere | 38390 |
| 13 | Dharwad | 25019 |
| 14 | Gadag | 14332 |
| 15 | Gulbarga | 74497 |
| 16 | Hassan | 45524 |
| 17 | Haveri | 35365 |
| 18 | Kodagu | 5471 |
| 19 | Kolar | 76304 |
| 20 | Koppal | 36330 |
| 21 | Mandya | 47720 |
| 22 | Mysore | 76042 |
| 23 | Raichur | 78241 |
| 25 | Shimoga | 33311 |
| 25 | Tumkur | 71345 |
| 26 | Udupi | 12250 |
| 26 | Uttara Kannada | 21927 |
| | **Total** | **1226345** |

74 (152) ಶ್ರೀ ವಾಟಾಳ್ ನಾಗರಾಜ್ (ಚಾಮರಾಗನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳೆಷ್ಟು? [ಜಿಲ್ಲಾವಾರು ಮಾಹಿತಿ ಒದಗಿಸುವುದು];

ಆ) ಈ ಶಾಲೆಗಳಲ್ಲಿ ಕೊರತೆಯಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು;

ಇ) ಚಾಮರಾಜನಗರ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೊರತೆಯಿರುವ ಶಿಕ್ಷಕರ ಹುದ್ದೆಯನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?